ಶ್ರೀ ಆಲೂರು ಹನುಮಂತಪ್ಪ.—ಈ ಹಿಂದೆ ಒಂದಾವರ್ತಿ ಈ ಕೆರೆಯದುರಸಿ, ಬಗ್ಗೆ 21,500 ರೂಪಾಯಿಗಳಿಗೆ ಒಂದು ಅಂದಾಜಾಗಿತ್ತು. ಆನಂತರ ಆ ಸ್ಥಳವನ್ನು ಸೂಪರಿಂಟೆಂಡೆಂಟಿಂಗ್, ಇಂಜಿನಿಯರ್ ಅವರು ಹೋಗಿ ಪರಿಶೀಲನೆಮಾಡಿದನಂತರ ಆ ಎಸ್ಟಿಮೇಟು 1 ಲಕ್ಷಕ್ಕೇರಿಪ್ಪೈಜಾಯಿತು. 180 ಎಕರೆಗೆ ನೀರು ಸರಬರಾಯಿ ಆಗುತ್ತೆಂದು ಅಂದಾಜು ಮಾಡಿದ್ದರು. ಆದರೆ ನೀರು ಮಳುಗಡೆ ಜಾಸ್ತಿ ಆಗುತ್ತೆಂದು ನಿಲ್ಲಿಸಲಾಯಿತು.

ಶ್ರೀ ಸಿ. ಎಚ್. ಲಿಂಗದೇವರು.—ಆ ಕೆಲಸವನ್ನೇ ಮತ್ತೆ ಪರಿಶೀಲನೆಮಾಡಿ ಅಲ್ಲಿ ಕೆರೆ ಕಟ್ಟಿಸಲು ಪ್ರಾಗ್ರತೆ ಪ್ರಯತ್ನ ಪಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಪರಿಶೀಲನೆ ಮಾಡಲು ಅಭ್ಯಂತರವೇನೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆ ಅಚ್ಚುಕಟ್ಟಿನಲ್ಲಿ ಗಾರ್ಡನ್‌ಲ್ಯಾಂಡ್ ಆಗುತ್ತೋ ಪ್ಯಾಡಿ ಲ್ಯಾಂಡ್ ಆಗುತ್ತೋ ?

ಶ್ರೀ ಆಲೂರು ಹನುಮಂತಪ್ಪ.—ಗಾರ್ಡನ್ ಲಾಂಡ್ ಸೇರಿದ್ದರೂ ಸೇರಿರಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಇಂಡೈರೆಕ್ಟಾಗಿ ಅನುಕೂಲ ಮಾಡತಕ್ಕ ಕೆಲಸ ಮಾಡಬೇಡಿ. ಜನರೇನು ಕೇಳುತ್ತಾರೋ ಅದನ್ನು ಮಾಡಲು ತಮಗೇನು ತೊಂದರೆಯಿದೆ ?

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದವರು ಜನಗಳೇನು ಕೇಳುತ್ತಾರೋ ಆ ಪ್ರಪ್ರೋ ಜಲ್‌ಗಳನ್ನೇ ಮುಂದುವರಿಸುತ್ತಾರೆ.

ಶ್ರೀ ಕೆ. ಸಿ. ರೆವಣ್ಣಸಿದ್ದಪ್ಪ.—ಬೋರನ ಕಣಿವೆ ಕೆಳಗೆ ಸಾಕಾಗತಕ್ಕದ್ದೆಲ್ಲ 1,400 ಎಕರೆಗಳು ಮಾತ್ರ. ಈ ಸ್ಥಳದಲ್ಲಿ ಒಂದು ಸಣ್ಣ ಕೆರೆ ಕಟ್ಟಿದರೆ ಆ ಬೋರನ ಕಣಿವೆ ಕೆರೆನೀರಿಗೇನು ತೊಂದರೆಯಾಗುವುದಿಲ್ಲ. ಇಲ್ಲ ಅನೇಕ ಬಡ ಜನರಿಗೆ ಅನುಕೂಲವಾಗುತ್ತದೆ—ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಆ ಬೋರನ ಕಣಿವೆ ಕೆರೆಗೆ ಹೆಚ್ಚುನೀರಿನ ಸರಬರಾಯಿ ಆಗುತ್ತಿದೆಯೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ವಿಚಾರವನ್ನು ಎಗ್ಜಾಮಿನ್ ಮಾಡಿಸಬೇಕಾಗಿದೆ. ಆ ಬೋರನ ಕಣಿವೆ ಕೆರೆಯಲ್ಲಿ 8352 ಯೂನಿಟ್ ನೀರು ಇರುತ್ತೆಂದು ಗೊತ್ತಾಗಿದೆ. ಆ ನೀರು 8600 ಎಕರೆಗಳಿಗೆ ಉಪಯೋಗವಾಗಬೇಕು. ಆದರೆ ಈಗ ಅಲ್ಲಿ 1,400 ಎಕರೆಗೆ ಮಾತ್ರ ನೀರು ಸರಬರಾಯಿ ಆಗುತ್ತಿದೆ. ಅದನ್ನು ಎಗ್ಜಾಮಿನ್ ಮಾಡಿಸ ಬೇಕಾಗಿದೆ. ಆದರೆ ಈಗ ಈ ವ್ಯಾಲಿಯಲ್ಲಿ 4 ಪಿಕಪ್‌ಗಳನ್ನು ಕಟ್ಟಿಸಿದರೆ ಆ ಕೆರೆಗೇನೂ ತೊಂದರೆಯಾಗುವುದಿಲ್ಲ—ಇದರಿಂದ ಹೆಚ್ಚಿಗೆ ಸಬ್‌ಮರ್ಷನ್ ಕೂಡ ಆಗುವುದಿಲ್ಲ. ಈ ನಾಲ್ಕು ಪಿಕಪ್‌ಗಳಿಂದಲೇ ನಾನಾಗಲೇ ಹೇಳಿದಂತೆ 700–800 ಎಕರೆಗೆ ನೀರು ಸರಬರಾಯಿ ಆಗುತ್ತೆ ಎಂತ ಈಗ ನನ್ನ ಮುಂದಿರತಕ್ಕ ಪೇಪರು ವರದಿ ಹೇಳುತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ತಾವೀಗ ಆ ಪೇಪರು ಮೇಲಿರತಕ್ಕ ವರದಿ ನೋಡಿಕೊಂಡು ಮಾತನಾಡುತ್ತಿದ್ದೀರಿ. ಯಾರೋ ಒಂದು ವರದಿಯನ್ನು ಬರೆದು ಕೊಟ್ಟಿದ್ದಾರೆ, ಅದನ್ನು ನೀವು ನೋಡಿಕೊಂಡು ಉತ್ತರ ಹೇಳುತ್ತಿದ್ದೀರಿ. ಆದರೆ ತಾವು ಆ ಜಾಗಕ್ಕೆ ಖುದ್ದಾಗಿ ಹೋಗಿ ಜನರ ತೊಂದರೆಗಳೇನು ಎಂಬುದನ್ನು ನೋಡಿ, ಅಲ್ಲಿ ಜನರೇನು ಹೇಳುತ್ತಾರೆಂಬುದನ್ನು ಕೇಳಿ ಈ ಕೆಲಸ ಗಳನ್ನು ಮಾಡಬೇಕೋ ಅಥವಾ ತಮ್ಮ ಮನಸ್ಸಿಗೆ ಬಂದಂತೆ ತಾವು ಮಾಡಬೇಕೋ ?

ಶ್ರೀ ಆಲೂರು ಹನುಮಂತಪ್ಪ.—ಅಗತ್ಯವೆಂದರೆ ನಾನೂ ಕೂಡ ಆ ಸ್ಥಳಕ್ಕೆ ಹೋಗಿ ನೋಡಿ ಕೊಂಡು ಬರುತ್ತೇನೆ. ಜನರನ್ನು ಖುದ್ದಾಗಿ ಕಂಡು ವಿಚಾರ ಮಾಡೇಮಾಡುತ್ತೇವೆ.

Restoration of Pemmaladevanahalli Tank in Chikkanayakanahalli Taluk.

*Q.—610. Sri C. H. LINGADEVARU (Chikkanayakanahalli).—

With the Government be pleased to state.—

(*a*) when the estimate for the restoration of Pemmaladevanahalli tank near Shettykere Hobli, Chikkanayakanahalli Taluk, was prepared ;

(*b*) ths estimated cost of the same ;

(*c*) the reasons for not commencing the work so far ?

A.— Sri ALUR HANUMANTHAPPA (Deputy Minister for Minor Irrigation).—

(*a*) No estimate for restoration of Pemmaladevanahalli tank has been prepared ; no tank as such exists ;

(*b*) & (*c*) Do not arise in view of reply to clause (*a*).

ಶ್ರೀ ಸಿ. ಎಚ್. ಲಿಂಗದೇವರು.—(ಎ)ಗೆ ಉತ್ತರವಾಗಿ ಅಲ್ಲಿ ಕೆರೆಯೇ ಇಲ್ಲ ಅಂತ ಹೇಳಲಾಗಿದೆ. ಬಹುಶಃ ಈ ಕೆರೆ ಚಿಕ್ಕನಾಯಕನ ಹಳ್ಳಿ ಮತ್ತು ತಿಪಟೂರು ತಾಲ್ಲೂಕುಗಳ ಬಾರ್ಡರಿನಲ್ಲಿರುವುದರಿಂದ ಈ ಕಡೆ ಚಿಕ್ಕನಾಯ್ಕನ ಹಳ್ಳಿಗೆ ಸೇರಿಲ್ಲ ಎಂತ ಹೀಗೆ ಉತ್ತರ ಕೊಟ್ಟಿದ್ದಾರೆಂತ ಕಾಣುತ್ತದೆ. ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ನೋಡಿಸುತ್ತೀರಾ ?

† ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಈಗ ಹೆಮ್ಮಲಹಳ್ಳಿ ಕೆರೆ ರೆಸ್ಟೋರೇಷನ್ ಬಗ್ಗೆ ಅಂದಾಜು ತಯಾರಾಗಿದೆ, ಆದ್ದರಿಂದ ಆ ರೀತಿ ಹೇಳಿದೆ ಉತ್ತರದಲ್ಲಿ.

ಶ್ರೀ ಸಿ. ಎಚ್. ಲಿಂಗದೇವರು.—ಆ ಅಂದಾಜು ಮೊಬಲಗೆಷ್ಟು ?

ಶ್ರೀ ಆಲೂರು ಹನುಮಂತಪ್ಪ.—80 ಸಾವಿರ ರೂಪಾಯಿಗಳು ಅಂದಾಜು ಮೊದಲಾಗಿತ್ತು. ಈಗ ರಿವೈಜ್ಡ್ ಅಂದಾಜಿದ ಪ್ರಕಾರ ಒಂದು ಲಕ್ಷ ಇಪ್ಪತ್ತುಸಾವಿರದ ಆರುನೂರು ರೂಪಾಯಿಗಳಾಗಿರುತ್ತೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ಅಂದಾಜು ತಯಾರಾಗಿ ಎಷ್ಟು ವರ್ಷಗಳಾಯಿತು ?

ಶ್ರೀ ಆಲೂರು ಹನುಮಂತಪ್ಪ.—1955ರಲ್ಲೇ ಸರ್ಕಾರಕ್ಕೆ ಈ ಬಗ್ಗೆ ಒಂದು ವರದಿ ಬಂದಿತ್ತು. ಬೋರನ ಕಣಿವೆ ಕೆರೆಗೆ ಇದರಿಂದೇನಾದರೂ ಅಡಚಣೆ ಆಗುತ್ತಿದೆಯೇ ಎಂಬುದನ್ನು ನೋಡಲು ಇಇವೆಸ್ಟಿಗೇಷನ್‌ಗೆ ಸ್ವಲ್ಪಕಾಲ ಹಿಡಿಯಿತು. ಈ ಕೆರೆಯ ಕಟ್ಟಡದಿಂದ ಬೋರನ ಕಣಿವೆಗೇನೂ ತೊಂದರೆಯಾಗುವುದಿಲ್ಲವೆಂತ ತಿಳಿದು ಬಂದಿದೆ. ಈ ಬೋರನ ಕಣಿವೆ ಕೆರೆ 325 ಕೆರೆಗಳಿಗೆ ಆಶ್ರಯವಾಗಿದೆ. ಈ ಬಗ್ಗೆ ನಮಗೆ 20-3-63 ರಲ್ಲಿ ಒಂದು ವರದಿ ಬಂದಿದೆ ಈ ವಿಚಾರದಲ್ಲಿ S. E. ಅವರು ತೀವ್ರ ಪರಿಶೀಲನೆ ನಡೆಸುತ್ತಿದ್ದಾರೆ ಎಂತ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸಾಲಿನ ಬಜೆಟ್ಟಿನಲ್ಲಿ ಇದಕ್ಕೆ ಹಣ ಒದಗಿಸಿದ್ದಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಈಗ ತಾನೆ ನಮಗೆ ವರದಿ ಬಂದಿದೆ ಎಂತ ಈಗ ತಿಳಿಸಿದೆ.

Steps taken to prevent the Tanks from being Silting up in Chikkanayakanahalli Taluk.

**Q.*—613. Sri C. H. LINGADEVARU (Chikkanayakanahalli).—

Will the Government be pleased to state.—

(*a*) whether it has come to their notice that the earth removed by the owners of the Manganese and Iron Mines in Chikkanayakanahalli Taluk is being thrown out into a nearby halla ;

(*b*) whether it has also come to their notice that on account of this, that the earth referred to above is washed away by rains and that thereby the tanks below are being silted up ;

(*c*) the number and names of tanks in the above taluk which are being silted up likewise ;

(*d*) whether they have taken any steps to prevent the tanks from being silted up as stated above ?

A.—Sri MAQSOOD ALI KHAN (Deputy Minister for Mines and Geology [on behalf of SRI K. MALLAPPA (Minister for Industries and Commerce)].—

(*a*) Yes.

(*b*) Yes.